ಸರ್ಕಾರವೇ ದಾರಿ ಮಾಡಿಕೊಟ್ಟ ಹಾಗಾಗಿದೆ. ಇವತ್ತು ಹರಿಜನರ ಕಡೆಯಿಂದ ಹುದ್ದೆಗಳನ್ನು ತುಂಬಲು ಸಾಧ್ಯವಾಗುವಷ್ಟು ಅಭ್ಯರ್ಥಿಗಳು ಬರುವುದಿಲ್ಲ ಎನ್ನುವಂಥಾದ್ದು ಸರ್ಕಾರ ನಮಗೆ ಕೊಡುವ ತಪ್ಪು ಮಾಹಿತಿ ಎಂದು ನಾನಾದರೂ ಭಾವಿಸುತ್ತೇನೆ. ಈ ದಿಕ್ಕಿನಲ್ಲಿ ಒಂದು ಟೈಮ್ ಬಾಂಡ್ ಲಿಮಿಟ್ಟನ್ನು ಕೊಡಿ. ಹಿಂದಿನ ಸಾರಿಯ ಅಧೀವೇಶನದಲ್ಲೂ ಕೂಡ ಇದೇ ರೀತಿಯಾದ ಉತ್ತರವನ್ನು ಕೊಡುತ್ತಾ ಬಂದಿದ್ದೀರಿ. ಈ ಕೆ.ಎಸ್.ಆರ್.ಟಿ.ಸಿ. ನಿಮ್ಮ ಕೈಗೆ ಸಿಕ್ಕಿ ಒಂದು ವರ್ಷ, ಮೂರು ತಿಂಗಳಾಗಿದೆ. ಇನ್ನಾದರೂ ಕೂಡ ಒಂದು ತಿಂಗಳೋ ಅಥವಾ ಒಂದೂವರೆ ತಿಂಗಳೋ ಹೀಗೆ ಒಂದು ಟೈಮ್ ಲಿಮಿಟ್ ಮಾಡಿ ಹೇಳಿ, ಸುಸೂತ್ರವಾಗಿ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ? ಲಾಭ ಮಾಡಲಿಕ್ಕೆ ವ್ಯವಸ್ಥಿತವಾಗಿರತಕ್ಕಂಥ ಪ್ರಯತ್ನ ನಿಮ್ಮ ಕಡೆಯಿಂದ ಆಗುತ್ತದೆಯೇ ಎಂದು ನಿಮ್ಮಿಂದ ಉತ್ತರವನ್ನು ಬಯಸುತ್ತಿದ್ದೇನೆ.

ಶ್ರೀ ಕೆ.ಎಸ್.ಬೇಳಗಿ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎಸ್.ಸಿ/ಎಸ್.ಟಿ.ಯವರ ಬಗ್ಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆಂದು ಹೇಳಿದರು. ಅದು ಸರಿಯಲ್ಲ. ನಾವು ಪ್ರತಿಯೊಂದು ವಿಭಾಗದಲ್ಲಿ ಹುದ್ದೆಗಳನ್ನು ಭರ್ತಿ ಮಾಡುವಾಗ ಕಂಡು ಬಂದಂಥ ಅಂಕಿ ಸಂಖ್ಯೆಗಳನ್ನು ನಾನು ಕೊಡಬಹುದು. ಎಸ್.ಸಿ./ಎಸ್.ಟಿ. ಕೋಟಾ ಹುದ್ದೆಯನ್ನು ಭರ್ತಿ ಮಾಡಬೇಕು, ಶಾರ್ಟೇಜ್ ಇದ್ದರೆ ಅದನ್ನು ತುಂಬಿಕೊಳ್ಳುವುದಕ್ಕೆ ನಾನು ಹೇಳಿದ್ದೇನೆ. ಮಾನ್ಯ ಸದಸ್ಯರು ಎಸ್.ಸಿ/ಎಸ್.ಟಿ. ಹುದ್ದೆಗಳನ್ನು 1 ತಿಂಗಳು ಅಥವಾ 2 ತಿಂಗಳಿನಲ್ಲಿ ಟೈಮ್ ಬಾಂಡ್ ಭರವಸೆ ಕೊಡಿ ಎಂದು ಹೇಳಿದ್ದಾರೆ. ಆದರೆ ಆ ರೀತಿ ಟೈಮ್ ಬಾಂಡ್ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಸಾರಿಗೆ ಸಂಸ್ಥೆಯಲ್ಲಿ ಅನೇಕ ಸಮಸ್ಯೆಗಳು ಇವೆ. ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಅವ್ಯವಸ್ಥೆಯನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಹಾಗೂ ಸಾರ್ವಜನಿಕರಿಗೆ ಒಳ್ಳೆಯ ಸೇವೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಒಟ್ಟಿನಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆದಷ್ಟು ಬೇಗನೆ ವ್ಯವಸ್ಥೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ವಿಷಯ:- ರಾಜ್ಯದಲ್ಲಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 114(1047)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ):- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಅವರಿಗೆ ದಿನಗೂಲಿ ನಿಗದಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳು ಏನು?

ಶ್ರೀ ಸಿ.ಗುರುನಾಥ್(ಕಾರ್ಮಿಕ ಸಚಿವರು):- ಅ) ಅಸಂಘಟಿತಾ ಕಾರ್ಮಿಕರ ವಿಶ್ಲೇಷನ ಅಥವಾ ಜನಗಣತಿ ಅಂಕಿ ಸಂಖ್ಯೆಗಳನ್ನು ಲಭ್ಯವಿರದೆ ಇರುವುದರಿಂದ ಅಂದಾಜು 1.87 ಕೋಟಿ ಎಂದು ವಿವರಿಸಲಾಗಿದೆ.

ಆ) ಸರ್ಕಾರ 38 ಉದ್ದಿಮೆಗಳಿಗೆ ಲಗತ್ತಿಸಿರುವ ಅನುಬಂಧ-ಅ ನಲ್ಲಿ ವಿವರಿಸಿದಂತೆ ಕನಿಷ್ಠ

ವೇತನವನ್ನು ನಿಗದಿ ಮಾಡಿದೆ.

ಅನುಬಂಧ-ಎ

ಈ ಕೆಳಕಂಡ ಷೆಡ್ಯೂಲ್ಡ್ ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ನಿಗದಿ ಪಡಿಸಲಾಗಿದೆ ಹಾಗೂ ಪರಿಷ್ಕರಿಸಲಾಗಿದೆ.

1. ರೆಸಿಡೆನ್ಷಿಯಲ್ ಹೋಟೆಲ್ಸ್ ಮತ್ತು ಈಟಿಂಗ್ ಹೌಸಸ್
2. ಟೈಲರಿಂಗ್
3. ಕಾಫಿ ಕ್ಯೂರಿಂಗ್
4. ಫಿಲ್ಮ್ ಇಂಡಸ್ಟ್ರಿ
5. ಅಗರಬತ್ತಿ
6. ಕಾಟನ್ ಜಿನ್ನಿಂಗ್ ಅಂಡ್ ಪ್ರೆಸ್ಸಿಂಗ್
7. ರೈಸ್, ದಾಲ್ ಅಂಡ್ ಫ್ಲೋರ್ ಮಿಲ್ಸ್
8. ವುಡ್ ವರ್ಕ್ಸ್ -(ಎ) ಪ್ಲೈವುಡ್
   (ಬಿ) ಕಾರ್ಪೆಂಟ್ರಿ ಇಂಡಸ್ಟ್ರಿ ಅಂಡ್ ಸಾಮಿಲ್ ಇಂಡಸ್ಟ್ರಿ
   (ಸಿ) ವೆನೀರ್ ಇಂಡಸ್ಟ್ರಿ
   (ಡಿ) ಟಿಂಬರ್ ಡಿಪೋಸ್
   (ಇ) ಮ್ಯಾಚ್ ಇಂಡಸ್ಟ್ರಿ
9. ಪ್ರಿಂಟಿಂಗ್ ಪ್ರೆಸ್
10. ಸೆರಾಮಿಕ್ಸ್, ಸ್ಟೋನ್‌ವೇರ್ ಅಂಡ್ ಪಾಟರೀಸ್
11. ಕನ್‌ಸ್ಟ್ರಕ್ಷನ್ ಆರ್ ಮೇನ್‌ಟೆನೆನ್ಸ್ ಆಫ್ ರೋಡ್ ಆರ್ ಬಿಲ್ಡಿಂಗ್ ಆಪರೇಷನ್ಸ್
12. ಸೆರಿಕಲ್‌ಚರ್
13. ಪಬ್ಲಿಕ್ ಮೋಟಾರ್ ಟ್ರಾನ್ಸ್‌ಪೋರ್ಟ್
14. ಸ್ಟೋನ್ ಬ್ರೇಕಿಂಗ್ ಅಂಡ್ ಸ್ಟೋನ್ ಕ್ರಷಿಂಗ್
15. ಟ್ಯಾನರೀಸ್ ಅಂಡ್ ಲೆದರ್ ಮ್ಯಾನುಫ್ಯಾಕ್ಚರಿಂಗ್
16. ಕಾರ್ಡಮಮ್ ಮಲಾಸಿಸ್ ಅಂಡ್ ಕಾರ್ಡಮಮ್ ಗಾರ್ಡನ್ಸ್
17. ಪ್ಲಾಂಟೇಷನ್ - ಸಿಂಕೋನಾ, ರಬ್ಬರ್, ಟೀ ಅಂಡ್ ಕಾಫಿ ಪ್ಲಾಂಟೇಷನ್ಸ್ (ನಾನ್ ಸ್ಟಾಫ್)
18. ಖಂಡಸಾರಿ ಷುಗರ್ ಫ್ಯಾಕ್ಟರೀಸ್
19. ಟಾಡಿ ಟ್ಯಾಪಿಂಗ್
20. ಕ್ಯಾಷ್ಯೂ ಇಂಡಸ್ಟ್ರಿ
21. ಇಂಜಿನಿಯರಿಂಗ್ ಇಂಡಸ್ಟ್ರಿ
22. ಟೈಲ್ ಇಂಡಸ್ಟ್ರಿ
23. ಟೊಬ್ಯಾಕೊ ಇಂಡಸ್ಟ್ರಿ ಇನ್‌ಕ್ಲೂಡಿಂಗ್ ಬೀಡಿ ಮೇಕಿಂಗ್ (ಎ) ಟೊಬ್ಯಾಕೊ ಪ್ರೊಸೆಸಿಂಗ್
24. ಫೌಂಡ್ರಿ ವಿತ್ ಆರ್ ವಿತೌಟ್ ಮೆಷಿನ್ಸ್ ಶಾಪ್ಟ್ಸ್

25. ಆಟೊಮೊಬೈಲ್ ಇಂಜಿನಿಯರಿಂಗ್ (ಇನ್‌ಕ್ಲೂಡಿಂಗ್ ಸರ್ವೀಂಗ್ ಅಂಡ್ ರಿಪೇರಿಂಗ್ ವರ್ಕ್ಸ್)
26. ಆಯಿಲ್ ಮಿಲ್ಸ್
27. ಹಾಸ್ಪಿಟಲ್ಸ್ ಅಂಡ್ ನರ್ಸಿಂಗ್ ಹೋಮ್ಸ್
28. ಕ್ಲಬ್ಸ್
29. ಶಾಪ್ಸ್ ಅಂಡ್ ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್ಸ್
30. ಟೆಕ್ಸ್‌ಟೈಲ್ಸ್ (ಸಿಲ್ಕ್) ಇಂಡಸ್ಟ್ರಿ
31. ಕನ್‌ಫೆಕ್ಷನರಿ
32. ಬೇಕರೀಸ್
33. ಅಗ್ರಿಕಲ್‌ಚರ್ ಪಾರ್ಟ್-2 (ಎ) ಸಾಯಿಲ್ ಕನ್‌ಸರ್ವೇಷನ್
34. ಲಾಂಡ್ರಿ
35. ಪೆಟ್ರೋಲ್ ಅಂಡ್ ಡೀಸೆಲ್ ಪಂಪ್ಸ್
36. ಹ್ಯಾಂಡ್‌ಲೂಮ್ ಅಂಡ್ ಪವರ್‌ಲೂಮ್ಸ್ (ಕಾಟನ್) ಇಂಡಸ್ಟ್ರಿ
37. ಬಿಸ್ಕಟ್ಸ್
38. ಫಾರೆಸ್ಟ್ರಿ ಅಂಡ್ ಟಿಂಬರಿಂಗ್ ಇಂಡಸ್ಟ್ರಿ

ಟಿಪ್ಪಣಿ:-

ವುಡ್‌ವರ್ಕ್ಸ್, ಇನ್‌ಕ್ಲೂಡಿಂಗ್ ಪ್ಲೈವುಡ್ ಅಂಡ್ ಕಾರ್ಪೆಂಟ್ರಿ ಇಂಡಸ್ಟ್ರೀಸ್, ಸಾ ಮಿಲ್ಸ್, ವಿನೀರ್ ಇಂಡಸ್ಟ್ರಿ, ಟಿಂಬರ್ ಡಿಪೋ ಮತ್ತು ಮ್ಯಾಚ್ ವರ್ಕ್ಸ್ ಇವುಗಳು ಒಂದೇ ಉದ್ದಿಮೆಗೆ ಸೇರಿರುತ್ತವೆ. ಇವುಗಳು ಒಂದೇ ಉದ್ದಿಮೆಯಾಗಿದ್ದರೂ ಕನಿಷ್ಠ ವೇತನವನ್ನು ಪ್ರತ್ಯೇಕವಾಗಿ ಪ್ಲೈವುಡ್ ಮತ್ತು ಕಾರ್ಪೆಂಟ್ರಿಗೆ ನಿಗದಿಪಡಿಸಲಾಗಿದೆ.

(1) ಕಲ್ಲುಗಣಿಗಳಲ್ಲಿ ಕಲ್ಲು ಒಡೆಯುವ ಮತ್ತು ಕಲ್ಲು ಪುಡಿ ಮಾಡುವ ಉದ್ದಿಮೆಗಳನ್ನು ಅನುಸೂಚಿತ ಉದ್ದಿಮೆಗಳ ಪಟ್ಟಿಯಿಂದ ಸರ್ಕಾರಿ ಅಧಿಸೂಚನೆ ಸಂ. ಎಲ್‌ಡಿ 183 ಎಲ್‌ಎಂಡಬ್ಲ್ಯು 93, ದಿನಾಂಕ 24. 11. 1993ರಲ್ಲಿ ವಿಲುಪ್ತಗೊಳಿಸಲಾಗಿದೆ.

(2) ಅಧಿಸೂಚನೆ ಸಂ. ಸಕಾಬಾ 64 ಎಲ್‌ಎಂಡಬ್ಲ್ಯು 82 ದಿನಾಂಕ 15-12-1993ರ ಅನ್ವಯ ಲೋಕಲ್ ಅಥಾರಿಟಿ (ಸ್ಥಳೀಯ ಪ್ರಾಧಿಕಾರ).

(3) ಮೇಲ್ಕಂಡಂತೆ ಕನಿಷ್ಠ ವೇತನವನ್ನು 37 ಅನುಸೂಚಿತ ಉದ್ದಿಮೆಗಳಿಗೆ ನಿಗದಿಪಡಿಸಲಾಗಿದೆ: ಪರಿಷ್ಕರಿಸಲಾಗಿದೆ.

ಶ್ರೀ ರಾಮಲಿಂಗಾ ರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೆ, ಸುಮಾರು 38 ಉದ್ದಿಮೆಗಳಿಗೆ ಸಂಬಂಧಪಟ್ಟ ಹಾಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ 1.87 ಕೋಟಿಯಷ್ಟು ಅಸಂಘಟಿತ ಕಾರ್ಮಿಕರು ಇದ್ದಾರೆಂದು ಮಾನ್ಯ ಕಾರ್ಮಿಕ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಈ ಪಟ್ಟಿಯಲ್ಲಿ ಕೃಷಿ ಕಾರ್ಮಿಕರು ಸೇರಿಲ್ಲ. ಇದಕ್ಕೆ ಉತ್ತರ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ

ಕೇಂದ್ರ ಸರ್ಕಾರ ರಾಷ್ಟ್ರೀಯ ಕನಿಷ್ಠ ವೇತನ ನೀತಿಯನ್ನು ತರುವ ಉದ್ದೇಶ ಇಟ್ಟುಕೊಂಡಿತ್ತು. ಆ ನೀತಿಯನ್ನು ತರುವ ಹಾಗಿದ್ದರೆ ಎಷ್ಟು ಕನಿಷ್ಠ ವೇತನವನ್ನು ಕೊಡಬೇಕೆಂದು ಕರ್ನಾಟಕ ಸರ್ಕಾರ ಸಲಹೆ ಮಾಡಿದೆ? ಮತ್ತು ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ? ಇವತ್ತು ಎ.ಪಿ.ಎಂ.ಸಿ. ಬಗ್ಗೆ ಮಾನ್ಯ ಬೈರೇಗೌಡರು ಒಂದು ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಅದರ ಪ್ರಕಾರ ಅಸಂಘಟಿತ ಕಾರ್ಮಿಕರಿಗೆ ವಿಮಾ ಯೋಜನೆ ಸ್ಕೀಂನ್ನು ತರುತ್ತಿದೆಯೇ? ಎಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಸಿ.ಗುರುನಾಥ್:- ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ 58 ಶೆಡ್ಯೂಲ್ಡ್ ಇಂಡಸ್ಟ್ರೀಸ್‌ಗಳು ಇದ್ದು, ಆ 58 ಶೆಡ್ಯೂಲ್ಡ್ ಇಂಡಸ್ಟ್ರೀಸ್‌ಗಳಲ್ಲಿ ನಾವು 38 ಶೆಡ್ಯೂಲ್ಡ್‌ನಲ್ಲಿ ಕೆಲಸ ಮಾಡತಕ್ಕಂಥ ಕೆಲಸಗಾರರಿಗೆ ಕನಿಷ್ಠ ವೇತನ ಕೊಡಬೇಕೆಂದು ಮಾಡಿದ್ದೇವೆ. ಉಳಿದಿರುವ 20 ಇಂಡಸ್ಟ್ರೀಸ್‌ಗಳಲಿ ಇರತಕ್ಕಂಥ ಕೆಲಸಗಾರರಿಗೂ ಮಾಡುತ್ತಿದ್ದೇವೆ. ಅದರಲ್ಲಿ 12 ಉದ್ದಿಮೆಗಳಿಗೆ ಟಾಪ್ ಪ್ರಿಯಾರಿಟಿ ಕೊಟ್ಟು ಅದಕ್ಕೆ ನೋಟಿಫಿಕೇಷನ್ ಹೊರಡಿಸಿದ್ದೇವೆ. ಅದರಲ್ಲಿ 8 ಅಂಡರ್ ಪ್ರೊಸಸ್‌ನಲ್ಲಿ ಇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ ಸಮಾನ ವೇತನ ಕೊಡಬೇಕು ಎನ್ನುವ ಉದ್ದೇಶ ಇದ್ದು, ಅದನ್ನು ಕಾರ್ಯರೂಪಕ್ಕೆ ತರಲಾಗುವುದೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. 31-32ನೇ ಕಾರ್ಮಿಕ ಸಮ್ಮೇಳನದಲ್ಲಿ ರಾಜ್ಯ ಸರ್ಕಾರದ ವತಿಯಿಂದ ನಾನು ಭಾಗವಹಿಸಿದ್ದೆ. ಇಡೀ ದೇಶದಲ್ಲಿ ಒಂದೇ ಸಮಾನ ವೇತನವನ್ನು ಕೊಡಬೇಕು ಎನ್ನುವ ಪ್ರಸ್ತಾವವನ್ನು ರಾಜ್ಯ ಸರ್ಕಾರದ ಪರವಾಗಿ ನಾನೂ ಸಹ ಆ ಸಮ್ಮೇಳನದಲ್ಲಿ ಹೇಳಿದ್ದೆ. ನಮ್ಮಲ್ಲಿ ಸ್ಕಿಲ್, ಅನ್‌ಸ್ಕಿಲ್ ಮತ್ತು ಡೇಲಿ ಸ್ಕಿಲ್ ಎಂದು ಮೂರು ತರಹದ ಕ್ಯಾಟಗರಿ ಇದೆ. ಮತ್ತು ಈ ಮೂರು ಕ್ಯಾಟರಿಗೆ ಮೂರು ತರಹದ ವೇತನ ಇದೆ. ಅದರಲ್ಲಿ ಸ್ಕಿಲ್ ಮತ್ತು ಅನ್‌ಸ್ಕಿಲ್ ಎಂದು ಎರಡು ತರಹದ ವೇತನ ಮಾಡಬೇಕು ಎನ್ನುವಂಥ ಪ್ರಸ್ತಾವನೆಯನ್ನು ಸಹ ಇಟ್ಟಿದ್ದೇವೆ. ಅಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರ ಪರವಾಗಿ ಹಾಗೂ ನೆರೆರಾಜ್ಯಗಳಲ್ಲಿ ಅಸಂಘಟಿತ ಕಾರ್ಮಿಕರು ಆ ರಾಜ್ಯಗಳಲ್ಲಿ ಏನು ಸೌಲಭ್ಯ ಪಡೆಯುತ್ತಿದ್ದಾರೆ ಆ ರೀತಿಯ ಸೌಲಭ್ಯವನ್ನು ಪಡೆಯಲು ಈಗಾಗಲೇ ನಾವು ನಮ್ಮ ರಾಜ್ಯ ಸರ್ಕಾರದ ವತಿಯಿಂದ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದರಲ್ಲೂ ಅಸಂಘಟಿತರಾಗಿ ಕೆಲಸ ಮಾಡತಕ್ಕಂಥ ಕೃಷಿ ಕಾರ್ಮಿಕರು ಇದ್ದಾರೆ, ಕಟ್ಟಡ, ಹೋಟೆಲ್ ಮತ್ತು ಅಗರಬತ್ತಿ, ಬೀಡಿ ಉದ್ದಿಮೆ ಹೀಗೆ ಬೇರೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಕೆಲಸಗಾರರ ಪರವಾಗಿ ಅವರ ಕೆಲಸಕ್ಕೆ ತಕ್ಕಂತೆ ಒಳ್ಳೆಯ ವೇತನಕ್ಕಾಗಿ ಲಾಂಗ್ ಟರ್ಮ್ ಬೆನಿಫಿಟ್, ಪ್ರಾವಿಡೆಂಟ್ ಫಂಡ್, ಗ್ರಾಜ್ಯುಟಿ ಅದಲ್ಲದೆ ಅವರ ಆರೋಗ್ಯ ವ್ಯವಸ್ಥೆಗಾಗಿ, ಅವರ ಮಕ್ಕಳ ವಿದ್ಯಾಭ್ಯಾಸದ ವ್ಯವಸ್ಥೆಗಾಗಿ ಈಗಾಗಲೇ ಮಾಲೀಕರು ಹಾಗೂ ಕೆಲಸಗಾರರ ವತಿಯಿಂದ ಹಣವನ್ನು ಕೂಡಿಸಿ ಈ ಯೋಜನೆ ಮಾಡಬೇಕೆನ್ನುವಂಥ ಕಾರ್ಯಕ್ರಮ ನಮ್ಮ ಸರ್ಕಾರದ ಮುಂದೆ ಇದೆ. ಈಗಾಗಲೇ ನಾವು ಅದನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಪರಿಶೀಲನೆಗಾಗಿ ಇಟ್ಟಿರುತ್ತೇವೆ.

ಅಧ್ಯಕ್ಷರು:- ಕಳೆದ ತಿಂಗಳು ಶರ್ಮರವರು ಒಂದು ಸಂಘಟನೆಯನ್ನು ಕರೆದುಕೊಂಡು ಬಂದಿದ್ದರು. ಅವರು ಇದೇ ಕ್ಯಾಟಗರಿಗೆ ಬರುತ್ತಾರೆಯೇ?

ಶ್ರೀ ರಾಮಲಿಂಗಾರೆಡ್ಡಿ:- ಶರ್ಮರವರು ಅಸಂಘಟಿತ ಕಾರ್ಮಿಕರನ್ನು ಬೆಂಗಳೂರಿಗೆ

ಕರೆದುಕೊಂಡು ಬಂದಿರುವುದು. ಅವರು ಸಹ ಇದೇ ಕ್ಯಾಟಗರಿಗೆ ಬರುತ್ತಾರೆ.

ಅಧ್ಯಕ್ಷರು:- ಸುಮಾರು ಜನ ನಿಮ್ಮ ಗವರ್ನ್‌ಮೆಂಟ್ ಏಜನ್ಸಿಯಲ್ಲಿ ಕೆಲಸ ಮಾಡುವವರಿಗೆ ತಿಂಗಳಿಗೆ 90 ರೂಪಾಯಿ, 100 ರೂಪಾಯಿ ಕೊಡುತ್ತಾರೆಂದು ಅವರು ಹೇಳಿದ್ದಾರೆ. ಅದು ನಿಜವೇ?

ಶ್ರೀ ಸಿ.ಗುರುನಾಥ್:- ಅಂದರೆ ಬೇರೆ ಬೇರೆ ಕ್ಷೇತ್ರದಲ್ಲಿ ಇರುವವರಿಗೆ ಆ ರೀತಿಯ ವೇತನ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಸನ್ಮಾನ್ಯ ಅಧ್ಯಕ್ಷರೆ, ಶರ್ಮಾರವರು ರ್ಯಾಲಿಯನ್ನು ಮಾಡಿದ ನಂತರ ಗೌರವಾನ್ವಿತ ಮುಖ್ಯ ಮಂತ್ರಿಗಳು ಒಂದು ಸಭೆಯನ್ನು ಕರೆದಿದ್ದರು. ಆ ಸಭೆಗೆ ಎಲ್ಲಾ ಇಲಾಖೆಗಳ ಕಾರ್ಯದರ್ಶಿಗಳನ್ನು ಕರೆಸಿ ಯಾವ ಯಾವ ಇಲಾಖೆಯಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದಾರೆ, ಅವರ ಸಂಬಳಗಳು ಏನು ಅವರಿಗೆ ಸಂಬಳವನ್ನು ಯಾವ ರೀತಿ ಹೆಚ್ಚು ಮಾಡಬೇಕು, ಖಾಯಂ ಆಗಿ ಅವರುಗಳನ್ನು ಮಾಡಬೇಕಾದರೆ ಏನು ಮಾಡಬೇಕು ಎನ್ನುವುದರ ಬಗ್ಗೆ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸಹ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರ ದೀರ್ಘವಾಗಿ ಪರಿಶೀಲಿಸಿ ಸದ್ಯದಲ್ಲಿಯೇ ಒಂದು ನಿರ್ಧಾರ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ನಿರ್ದೇಶನ ಕೊಟ್ಟಿದ್ದಾರೆ. ನಾನು ಸಹ ಆ ಸಭೆಯಲ್ಲಿ ಭಾಗವಹಿಸಿದ್ದೆ.

ಒಬ್ಬ ಮಾನ್ಯ ಸದಸ್ಯರು:- ಗವರ್ನ್‌ಮೆಂಟ್ ಏಜೆನ್ಸಿಯಲ್ಲಿ ಕೆಲಸ ಮಾಡತಕ್ಕಂಥವರಿಗೆ 90 ರೂಪಾಯಿ 100 ರೂಪಾಯಿಗೆ ಕೆಲಸ ಮಾಡುತ್ತಾರೆಯೇ ಎಂದು ನೀವು ಕೇಳಿದ ಪ್ರಶ್ನೆಗೆ ಅವರು ಉತ್ತರ ಕೊಡಲೇ ಇಲ್ಲ.

ಅಧ್ಯಕ್ಷರು:- ಗೃಹ ಸಚಿವರು ಉತ್ತರ ಕೊಟ್ಟಿದ್ದಾರೆ. ನಿರ್ದಿಷ್ಟವಾದ ಉತ್ತರ ಬೇಕೆಂದರೆ ಸಂಬಂಧಪಟ್ಟ ಇಲಾಖೆಯಿಂದ ತರಿಸಿಕೊಳ್ಳಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು:- ತಿಂಗಳಿಗೆ 90 ರೂಪಾಯಿಗೆ ಸರ್ಕಾರಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಂದರೆ ಬೇರೆ ಕಡೆ ಇದರ ಬಗ್ಗೆ ಏನು ಕೇಳುವ ಹಾಗೆಯೇ ಇಲ್ಲ.

ಅಧ್ಯಕ್ಷರು:- ಯಾವುದೇ ಆದೇಶವನ್ನು ಹೊರಡಿಸಬೇಕಾದರೂ ವಿವೇಚನಾಯುತವಾಗಿ ಆಲೋಚಿಸಿ ಕ್ರಮ ಕೈಗೊಳ್ಳಬೇಕು. ಯಾವುದೋ ಒಂದು ಆವೇಶದಲ್ಲಿ ಆದೇಶ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಗ್ರಂಥಾಲಯಗಳಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ 4ನೇ ವರ್ಗದ ನೌಕರರಿಗೆ ಕೂಡ ತಿಂಗಳಿಗೆ 90 ರೂಪಾಯಿಯಂತೆ ಕೊಡುತ್ತಿದ್ದಾರೆ.

ಅಧ್ಯಕ್ಷರು:- ಸನ್ಮಾನ್ಯ ಗೃಹ ಸಚಿವರಾದ ಸಿಂಧ್ಯಾರವರು ಎಲ್ಲಾ ವಿಚಾರಗಳ ಬಗ್ಗೆಯೂ ಹೇಳಿದರು. ಆಯಾಯಾ ಇಲಾಖೆಯ ಸಂಬಂಧಪಟ್ಟ ಕಾರ್ಯದರ್ಶಿಗಳ ಹತ್ತಿರ ಮಾಹಿತಿ ತರಿಸಿಕೊಳ್ಳುತ್ತೇವೆ, ಎಲ್ಲೆಲ್ಲಿ ನ್ಯೂನತೆಗಳು, ಲೋಪದೋಷಗಳು ಇವೆ ಅದನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ ಎಂದು ಹೇಳಿದರು. ಇಡೀ ಸರ್ಕಾರದ ಸ್ವಾಮ್ಯದಲ್ಲಿ ಎಲ್ಲೆಲ್ಲಿ ಇವೆ ಅವೆಲ್ಲವುಗಳ ಮಾಹಿತಿಯನ್ನು ತರಿಸಿಕೊಳ್ಳುತ್ತಿದ್ದೇವೆಂದು ಹೇಳಿದರು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಸರ್ಕಾರಕ್ಕೆ ಸಂಬಂಧಪಟ್ಟ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ

ನೌಕರರುಗಳ ಬಗ್ಗೆ ಅಂತಿಮವಾಗಿ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತಿದೆ. ಕೇವಲ ಪರಿಶೀಲಿಸುವಂಥದ್ದಲ್ಲ, ಇಡೀ ರಾಜ್ಯಾದ್ಯಂತ ಕೆಲಸ ಮಾಡುತ್ತಿರುವ ಎಲ್ಲಾ ನೌಕರರ ಬಹು ದಿನಗಳ ಬೇಡಿಕೆ ಯಾವುದು ಪೆಂಡಿಂಗ್ ಇತ್ತು ಅದನ್ನು ಈಡೇರಿಸಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ.

ಡಾ॥ ಎಂ.ಪಿ.ಕರ್ಕಿ:- ಮಾನ್ಯ ಅಧ್ಯಕ್ಷರೆ, ಕನಿಷ್ಟ ವೇತನವನ್ನು ನಿಗದಿ ಮಾಡಬೇಕಾದರೆ ರಾಜ್ಯದಲ್ಲಿ ಒಂದು ಸ್ಥಾಯಿ ಸಮಿತಿ ಇದೆ. ಆ ಸ್ಥಾಯಿ ಸಮಿತಿಯಲ್ಲಿ ಇರತಕ್ಕಂಥವರಿಗೆ ಎಲ್ಲಾ ವಿಚಾರಗಳಲ್ಲೂ ಪರಿಜ್ಞಾನವಿರುವುದಿಲ್ಲ. ಬೇರೆ ಬೇರೆ ತರಹದ ಕೈಗಾರಿಕೆಗಳ ಕಷ್ಟ ಸುಖ ಅವರಿಗೆ ಗೊತ್ತಿರುವುದಿಲ್ಲ. ಹಾಗಾಗಿ ಬೇರೆ ಬೇರೆ ತರಹದ ಇಂಡಸ್ಟ್ರಿಗಳಿಗೆ ಬೇರೆ ಬೇರೆ ಸಬ್ ಕಮಿಟಿಗಳನ್ನು ಮಾಡಿ, ಅದರ ಪರಿಶೀಲನೆ ಮುಖಾಂತರ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ ಅಲ್ಲವೇ? 2ನೆಯದು ಆ ನಿಗದಿ ಮಾಡಿರತಕ್ಕಂಥ ದಿನಭತ್ಯೆಯನ್ನು ಏನು ಕೊಡುತ್ತಾರೆ.....

ಅಧ್ಯಕ್ಷರು:- ನೀವು ಕೇಳುತ್ತಿರುವುದು ಈ ವಿಚಾರಕ್ಕೆ ಸಂಬಂಧಿಸಿದಲ್ಲ. ಸರ್ಕಾರದ ಕನಿಷ್ಟ ವೇತನ ಕಾಯಿದೆ ಪ್ರಕಾರ ಯಾವ ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ವೇತನ ಸಿಗುತ್ತಿಲ್ಲವೋ ಅದಕ್ಕೆ ಸಂಬಂಧಿಸಿದಂತೆ ಈಗ ಚರ್ಚೆಯಾಗುತ್ತಿದೆ. ಆದರೆ ಈಗ ನೀವು ಕೇಳುತ್ತಿರುವುದು ಸಂಘಟಿತ ಕಾರ್ಮಿಕರ ಬಗ್ಗೆ.

ಶ್ರೀ ಕೆ.ಜಯರಾಮ ಶೆಟ್ಟಿ:- ಸನ್ಮಾನ್ಯ ಅಧ್ಯಕ್ಷರೆ, ಈ ಕನಿಷ್ಟ ವೇತನ ಪ್ರಶ್ನೆಗಿಂತಲೂ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಾಗಿ ಯಾವುದೇ ಕೆಲಸ ಮಾಡಿದರೂ ಸೂಕ್ತ ಸಂಬಳ ಸಿಗಲೇಬೇಕು. ಅವರ ಜೀವನಕ್ಕೆ ಅವಶ್ಯಕವಾದಂಥ ರೀತಿಯಲ್ಲಿ ಎಲ್ಲಾ ಕಾರ್ಮಿಕರಿಗೆ ಸಮಾನ ವೇತನವನ್ನು ಕೊಡುವಂಥದ್ದು, ಈ ಕಾರ್ಯವನ್ನು ಸರ್ಕಾರ ಮಾಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಕೆಲವರು ಸಬಲರು ಇರಬಹುದು, ಇನ್ನು ಕೆಲವರು ದುರ್ಬಲರು ಇರಬಹುದು ಅದು ಬೇರೆ ವಿಚಾರ. ಸರ್ಕಾರಿ ಇಲಾಖೆಯಲ್ಲಿ ಬೇರೆ ತರಹ, ಖಾಸಗಿ ಇಲಾಖೆಯಲ್ಲಿ ಬೇರೆ ತರಹ ಇರುವಾಗ.....

ಅಧ್ಯಕ್ಷರು:- ಇದು ಪ್ರಶಂಸನೀಯವಾದ ಸಹೆ. ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಕೆ.ಜಯರಾಮ ಶೆಟ್ಟಿ:- ಆದ್ದರಿಂದ ಕರ್ನಾಟಕ ರಾಜ್ಯದಲ್ಲಿಯಾದರೂ ಕನಿಷ್ಟವೇತನ ಜಾರಿಗೆ ತರುವಂತೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಆಟೋರಿಕ್ಷಾಗಳನ್ನು ಓಡಿಸುವವರು, ಹೋಟೆಲುಗಳಲ್ಲಿ ಕೆಲಸ ಮಾಡುವಂಥ ಮತ್ತು ಖಾಸಗಿ ಬಸ್ಸುಗಳಲ್ಲಿ ಕೆಲಸ ಮಾಡತಕ್ಕಂಥ ಅಸಂಘಟಿತ ಕಾರ್ಮಿಕರಿಗೆ ಉದ್ಯೋಗದ ಭದ್ರತೆಯ ಭರವಸೆ ಇಲ್ಲ. ಕೆಲಸಕ್ಕೆ ಬೇಕಾದಾಗ ತೆಗೆದುಕೊಳ್ಳುತ್ತಾರೆ, ಬೇಡವಿದ್ದಾಗ ಕಳುಹಿಸಿಬಿಡುತ್ತಾರೆ. ಅಥವಾ 29 ದಿವಸ ಕೆಲಸ ಮಾಡಿಸಿಕೊಂಡು 30ನೇ ದಿವಸ ಬೇರೆ ಕಡೆಗೆ ಕಳುಹಿಸಿಬಿಡುತ್ತಾರೆ. ಈ ರೀತಿಯ ಅವ್ಯವಸ್ಥೆ ಚಾಲಕರಿಗೂ ಸಹ ಇದೆ. ಆದ್ದರಿಂದ ಉದ್ಯೋಗಗಳ ಭರವಸೆಯನ್ನು ಯಾವ ರೀತಿ ಕೊಡುತ್ತೀರಿ? ಇಂತಹ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು? ಇವರುಗಳ ಉದ್ಯೋಗ ಭರವಸೆಯ ಬಗ್ಗೆ ಸರ್ಕಾರದ ಕಾರ್ಯಕ್ರಮಗಳು ಏನಾದರೂ ಇವೆಯೇ?

ಅಧ್ಯಕ್ಷರು:- ರಾಜ್ಯದಲ್ಲಿರುವ ಅಸಂಘಟಿತ ಕಾರ್ಮಿಕರ ಸಂಪೂರ್ಣ ವಿವರ ತಮ್ಮ ಬಳಿ ಇಲ್ಲವೆಂದು ಅವರೇ ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. ಅಲ್ಲದೆ ಒಂದು ಅಂದಾಜಿನ

ಪ್ರಕಾರ ಅವರ ಸಂಖ್ಯೆ ಸುಮಾರು 1.87 ಕೋಟಿಯಷ್ಟು ಇರಬಹುದೆಂದು ಹೇಳಿದ್ದಾರೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಇಂತಹ ನೌಕರರ ಬಗ್ಗೆ ಸರ್ಕಾರದ ನೀತಿ ಏನು?

ಅಧ್ಯಕ್ಷರು:- ಮಾನ್ಯ ಮಂತ್ರಿಗಳ ಹತ್ತಿರ ಅವರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರಲ್ಲವೇ ನೀತಿಯನ್ನು ಪ್ರಕಟಿಸುವುದು. ಮಾಹಿತಿಯನ್ನು ಮೊದಲು ತರಿಸಿಕೊಳ್ಳಿ. ಮಾನ್ಯ ಬಂಗಾರಪ್ಪನವರು, ಎಲ್ಲರೂ ಶ್ರದ್ಧೆಯಿಂದ ಕೇಳಿ, ಇವರು ನಮಗೆ ಮತ್ತೆ ಮತ್ತೆ ಸಿಗುವುದಿಲ್ಲ.

ಶ್ರೀ ಎಸ್.ಬಂಗಾರಪ್ಪ :- ಸನ್ಮಾನ್ಯ ಅಧ್ಯಕ್ಷರು ನನ್ನನ್ನು ಎಲ್ಲಿಗೆ ಕಳುಹಿಸಬೇಕೆಂದು ತಾವು ಯೋಚನೆಯನ್ನು ಮಾಡಿದ್ದೀರಿ ಅದು ನನಗೆ ಇನ್ನೂ ಗೊತ್ತಾಗಲಿಲ್ಲ.

ಅಧ್ಯಕ್ಷರು:- ನೀವು ಎಲ್ಲಿಗೆ ಬೇಕಾದರೂ ಹೋಗಿ ಬನ್ನಿ, ಇವತ್ತು ತಾನೇ ದೆಹಲಿಯಿಂದ ಬಂದಿರುತ್ತೀರಿ, ನೀವು ಅಲ್ಲಿಗೆ ಹೋಗಬೇಕು ಎಂಬುದು ನಮ್ಮ ಆಸೆ. ಮತ್ತೆ ನಾವು ಅಧೀವೇಶನ ಸೇರುವ ಹೊತ್ತಿಗೆ ಏನೇನು ಆಗಿರುತ್ತದೆಯೋ ಗೊತ್ತಿಲ್ಲ.

ಶ್ರೀ ಎಸ್.ಬಂಗಾರಪ್ಪ :- ಮಾನ್ಯ ಅಧ್ಯಕ್ಷರೆ, ತಮ್ಮ ಅಭಿಪ್ರಾಯವು ಸದನದ್ದು ಆಗಿದ್ದರೆ, ತಮಗೂ ಸದನಕ್ಕೂ ಈ ಸಮಯದಲ್ಲಿ ಅಭಿನಂದನೆಗಳು. ಅದು ಏನೇ ಇರಲಿ, ಪ್ರಶ್ನೋತ್ತರಕ್ಕೆ ಸಂಬಂಧಪಟ್ಟ ಹಾಗೆ ಎರಡು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಸಂಘಟನೆಗೆ ಒಳಗಾಗಿರುವಂತಹ ವರ್ಗ ಒಂದು ಇದ್ದರೆ, ಅಸಂಘಟನೆಗೆ ಒಳಪಟ್ಟಿರುವಂತಹ ವರ್ಗ ಮತ್ತೊಂದು ಇದೆ. ಸಂಘಟಿತರಾಗಿ ನಾಳೆ ಒತ್ತಡವನ್ನು ತಂದು ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳುವಂತಹ ಶಕ್ತಿ ಆ ಸಂಘಕ್ಕೆ ಅಥವಾ ಸಾಂಗಿಕ ಶಕ್ತಿ ಮುಖಾಂತರ ಇದ್ದರೆ, ಇನ್ನು ಕೆಲವು ವರ್ಗದ ಜನ ಇಂತಹ ಸಂಘಟನಾ ಶಕ್ತಿಯನ್ನು ಬಳಕೆ ಮಾಡುವುದಕ್ಕೆ ಅವರಿಂದ ಸಾಧ್ಯವಾಗುವುದಿಲ್ಲ. ಏಕೆಂದರೆ ಅದು ಅಸಂಘಟಿತ ವರ್ಗವಾಗಿ ಮುಂದುವರೆಯುತ್ತದೆ. ಈ ದೃಷ್ಟಿಯಿಂದ ಸರ್ಕಾರ ಸಂಘಟನೆ, ಅಸಂಘಟನೆಯ ವಿಚಾರವನ್ನು ಬದಿಗೊತ್ತಿ ಅವಶ್ಯಕತೆಯ ಆಧಾರದ ಮೇಲೆ, ರಾಜ್ಯ ಸರ್ಕಾರದ ಪ್ರತಿಯೊಂದು ಇಲಾಖೆ ಮತ್ತು ಸಂಘ ಸಂಸ್ಥೆಗಳು, ಮಾನ್ಯ ಗೃಹ ಸಚಿವರಾದ ಶ್ರೀ ಸಿಂಧ್ಯರವರು ಹೇಳಿದ ಹಾಗೆ ಇಲಾಖೆಗಳು ಮತ್ತು ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸವನ್ನು ಮಾಡುವಂಥವರು ಅವರನ್ನು ಖಾಯಂ ಮಾಡತಕ್ಕ ವಿಚಾರ, ಅವರುಗಳು ಅವಶ್ಯಕವಾಗಿ ಬೇಕಾಗಿದ್ದರೆ, ಇದರ ಬಗ್ಗೆ ಒಂದು ಉದಾಹರಣೆಯನ್ನು ತಮಗೆ ಕೊಡುತ್ತೇನೆ. ತೋಟಗಾರಿಕೆಯ ಇಲಾಖೆಯಲ್ಲಿ ಕಸವನ್ನು ಗುಡಿಸತಕ್ಕಂತಹ ಕೆಲಸಗಾರರು, ಮಂತ್ರಿಗಳ ಮನೆಗಳಲ್ಲಿ, ಕಬ್ಬನ್ ಪಾರ್ಕ್, ಇತ್ಯಾದಿಗಳಲ್ಲಿ ಕೆಲಸ ಮಾಡುವವರು ಕೆಲವರು ಖಾಯಂ ಆದರೂ ಮತ್ತೆ ಕೆಲವರು ಖಾಯಂ ಆಗಲಿಲ್ಲ. ಖಾಯಂ ಆಗುವುದಕ್ಕೆ ಸುಪ್ರೀಂ ಕೋರ್ಟ್‌ನ ಒಂದು ಜಡ್ಜ್‌ಮೆಂಟ್ ಕಟ್ ಆಫ್ ಡೇಟ್ ಹಾಕಿ ಖಾಯಂ ಮಾಡಿದರು. ನಾವು ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲಿ ಒಂದು ವರ್ಗವನ್ನು ಆದ್ಯತೆಯ ಮೇಲೆಗೆ First come first serve ಎನ್ನುವ ರೀತಿ. ಏನು ಒಂದು ಆದೇಶವನ್ನು ಸುಪ್ರೀಂ ಕೋರ್ಟ್ ಕೊಟ್ಟಿದ್ದಾರೆ ಅದರ ಮೇರೆಗೆ ಖಾಯಂ ಮಾಡಿದೆವು. ಆದನ್ನೇ ಪ್ರೊ|| ಶರ್ಮಾಜೀ, ಹುಬ್ಬಳ್ಳಿಯವರ ಸಂಘಟನೆಯನ್ನು ತೆಗೆದುಕೊಂಡು, ಪ್ರತಿ ಇಲಾಖೆ ಅಥವಾ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥವರನ್ನು ಅವರ ಸೇವೆ ಅಗತ್ಯವೆಂದು ಕಂಡು ಬಂದಾಗ, ಅವರನ್ನು ಖಾಯಂ

ಮಾಡಬೇಕು. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಗ್ಯಾಂಗ್ ಮ್ಯಾನ್‌ಗಳು ಇರುತ್ತಾರೆ, ಬೇಕಾದರೆ ಅವರುಗಳನ್ನು ಕೆಲಸದಿಂದ ತೆಗೆದುಹಾಕಿ ಬಿಡಬಹುದು, ಆದರೆ ಅವರು ಏನು ಪಬ್ಲಿಕ್ ಸರ್ವೆಂಟ್ಸ್ ಅಲ್ಲ. ಹಾಗೆ ಅವರನ್ನು ತೆಗೆದು ಹಾಕಿದರೆ ನಾಳೆಯ ದಿವಸ ಅಲ್ಲಿ ಮಣ್ಣನ್ನು ಹಾಕುವುದಕ್ಕೆ ಮತ್ತು ಜಲ್ಲಿ ಕಲ್ಲುಗಳನ್ನು ಹಾಕುವುದಕ್ಕೆ ಒಬ್ಬರು ಬೇಕಾಗುತ್ತದೆ. Gangmen are not confirmed public government servants. Better you get them confirmed since we take the services of such people. ಆದ್ಯತೆಯ ಮೇಲೆ ಮಾಡಬೇಕು. ಅದೇ ರೀತಿಯಾಗಿ ಸುಪ್ರೀಮ್ ಕೋರ್ಟ್‌ನವರೂ ಸಹ ಅದನ್ನೇ ಹೇಳಿದ್ದಾರೆ. ಆದುದರಿಂದ ಅವರನ್ನು ಖಾಯಂ ಮಾಡುವಂತಹ ಅವಶ್ಯಕತೆ ತಮಗೆ ಇದೆ ಎನ್ನುವುದು ತಮ್ಮ ಗಮನಕ್ಕೆ ಬಂದುಬಿಟ್ಟರೆ, ಇಲಾಖೆ ಮತ್ತು ಸಂಘ ಸಂಸ್ಥೆಗಳಲ್ಲಿ ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರುಗಳನ್ನು ಖಾಯಂ ಮಾಡತಕ್ಕಂತಹ ಉದ್ದೇಶ ಅಲ್ಲಿ ಬರುತ್ತದೆ. ಖಾಯಂ ಆದರೆ ತಾವು ಹೇಳಿದಂತೆ ಟಿ.ಎ. ಮತ್ತು ಡಿ.ಎ. ಎಲ್ಲಾ ಬರುತ್ತದೆ; ಇದು ಬರಬೇಕಾದರೆ ಅವರು ಸರ್ಕಾರಿ ಖಾಯಂ ನೌಕರರು ಆಗಿರಬೇಕು ಇಲ್ಲದಿದ್ದರೆ ಕಾನೂನಿನಲ್ಲಿಯೂ ಅವರಿಗೆ ಟಿ.ಎ. ಮತ್ತು ಡಿ.ಎ.ಯನ್ನು ಕೊಡುವುದಕ್ಕೆ ಬರುವುದಿಲ್ಲ. ಆ ವಿಚಾರದಲ್ಲಿ ಸರ್ಕಾರ ತ್ವರಿತವಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈಗ ತಾವು ಇದನ್ನು ಒಪ್ಪಿಕೊಂಡಿರುತ್ತೀರಿ. ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ, ಅದು ಬಹಳ ಒಳ್ಳೆಯದು ಅದನ್ನು ಮುಂದುವರೆಸಬೇಕು, ಮತ್ತು ಕಾಲವನ್ನು ವ್ಯಯ ಮಾಡದೇ ಅಲ್ಲಿ ಕೆಲಸ ಮಾಡಬೇಕೆಂದು ನನ್ನ ಸೂಚನೆಯಾಗಿದೆ. ಸೂಚನೆ ಅಷ್ಟೇ ಉತ್ತರ ಮಾನ್ಯ ಸಚಿವರಲ್ಲಿ ಅಡಗಿದೆ.

ಶ್ರೀ ಜಿ.ಎ.ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೆ, ಇವತ್ತು ಮುಖ್ಯವಾಗಿ ಎರಡು ಪ್ರಶ್ನೆಗಳಿವೆ. ಮೊದಲನೆಯದು ಅಸಂಘಟಿತ ಕಾರ್ಮಿಕರಿಗೆ ಮಾನ್ಯ ಸಚಿವರು ಕನಿಷ್ಟ ವೇತನವನ್ನು ನಿಗದಿಪಡಿಸಿಲ್ಲವೆಂದು ಹೇಳುತ್ತಿದ್ದಾರೆ. ಯಾವ ಕಾರಣಕ್ಕಾಗಿ ಅವರಿಗೆ ಕನಿಷ್ಟ ವೇತನವನ್ನು ನಿಗದಿಪಡಿಸಿಲ್ಲ? ಇದನ್ನು ಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? ಎಂದು ಅವರು ಹೇಳಲಿಲ್ಲ. ಸುಮಾರು ಒಂದು ವರ್ಷಗಳ ಕಾಲದಿಂದಲೂ ಇದರ ಬಗ್ಗೆ ಒತ್ತಾಯವನ್ನು ತರುತ್ತಿದ್ದಾರೆ ಕಾರ್ಮಿಕ ಸಚಿವರು ಮತ್ತು ಸಂಬಂಧಪಟ್ಟಂತಹವರು ಕುಳಿತು ಚರ್ಚೆಯನ್ನು ಮಾಡಿ ಆಗಿದೆ, ಇವತ್ತಿಗೂ ಕೂಡ ಇದರ ಬಗ್ಗೆ ನೋಟಿಸ್ ಇಷ್ಯೂ ಮಾಡಿಲ್ಲ. ಬೆಂಗಳೂರಿನಲ್ಲಿರತಕ್ಕಂತಹ ಸಾವಿರಾರು ಸಂಸ್ಥೆಗಳಲ್ಲಿ ಕೆಲಸವನ್ನು ಮಾಡತಕ್ಕಂತಹ ಅಸಂಘಟಿತ ನೇಕಾರರು ಸುಮಾರು 5-6 ತಿಂಗಳುಗಳಿಂದ ಒಂದು ದೊಡ್ಡ ಚಳುವಳಿಯನ್ನು ಮಾಡಿದ್ದಾರೆ. ಅದರ ಬಗ್ಗೆ ಎರಡು ಪ್ರಶ್ನೆಗಳಿವೆ, ಅವರಿಗೆ ಕೆಲಸದ ಭದ್ರತೆ ಇಲ್ಲ. ಇನ್ನೊಂದು ಅವರಿಗೆ ನಿಗದಿತವಾದಂತಹ ವೇತನ ಇಲ್ಲ. ಕಳೆದ 6 ತಿಂಗಳುಗಳಿಂದ ನಿರಾಂತರವಾಗಿ ಹೋರಾಟವನ್ನು ನಡೆಸಿದ್ದಾರೆ. ಕಾರ್ಮಿಕ ಸಚಿವರು, ಮುಖ್ಯ ಮಂತ್ರಿಗಳು, ಗೃಹ ಮಂತ್ರಿಗಳು ಆ ಕಾರ್ಮಿಕರ ಮುಖಂಡರ ಜೊತೆಯಲ್ಲಿ ಕುಳಿತು ಚರ್ಚೆಯನ್ನು ನಡೆಸಿದ್ದಾರೆ. ಅವರ ಜೊತೆಯಲ್ಲಿ ಒಂದು ಚರ್ಚೆಯನ್ನು ಮಾಡುವುದಾಗಿ ತಿಳಿಸಿದ್ದರು ಆದರೆ ಇದರ ಬಗ್ಗೆ ಏನು ತೀರ್ಮಾನವಾಗಿಲ್ಲ. ಇವತ್ತು ಸಾವಿರಾರು ಜನ ನೇಕಾರರು ವಿಧಾನ ಸೌಧ ಚಲೋ ಎನ್ನತಕ್ಕಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ.

ಶ್ರೀ ಸಿ.ಗುರುನಾಥ್:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಕೇಳಿರತಕ್ಕಂತಹ ಪ್ರಶ್ನೆಗಳು ಬಹಳ ಗಂಭೀರವಾಗಿವೆ. ಮೊಟ್ಟ ಮೊದಲನೆಯದಾಗಿ ಅಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂತಹ ಕಾರ್ಮಿಕರಿಗೆ ಶೋಷಣೆಯಾಗುತ್ತಿರುವುದು ನಮ್ಮ ಸರ್ಕಾರದ ಗಮನಕ್ಕೆ ಬಂದಿದೆ. ಈ ವಿಷಯ ಎಲ್ಲಾರಿಗೂ ಗೊತ್ತಿದೆ. ಮೇಲಾಗಿ ಆ ಕಾರ್ಮಿಕರಿಗೆ ಕೊಡಬೇಕಾದಂತಹ ಸೌಲಭ್ಯಗಳ ಬಗ್ಗೆ ಚಿಂತನೆಯನ್ನು ಮಾಡತಕ್ಕಂತಹ ವಿಷಯ ನಮ್ಮ ಎದುರಿಗೆ ಇದೆ. ಒಂದು ಸಂಘಟಿತ ಕ್ಷೇತ್ರ ಮತ್ತೊಂದು ಅಸಂಘಟಿತ ಕ್ಷೇತ್ರ. ಸಂಘಟಿತ ಕ್ಷೇತ್ರದಲ್ಲಿ ಕೆಲಸಗಾರರಿಗೆ ಕೊಡತಕ್ಕಂತಹ ಸೌಲಭ್ಯ ಅವರು ಮಾಡತಕ್ಕಂತಹ ಕೆಲಸಕ್ಕೆ ಅನುಗುಣವಾಗಿ ವೇತನವನ್ನು ಕೊಡಲಾಗುತ್ತಿದೆ. ಆದರೆ ಈ ಅಸಂಘಟಿತ ಕ್ಷೇತ್ರದಲ್ಲಿ ಕೆಲಸವನ್ನು ಮಾಡತಕ್ಕಂತಹ ಕೆಲಸಗಾರರ ಕೆಲಸವೇ ಬೇರೆಯಾಗಿರುತ್ತದೆ. ಅದು ಟೈಮ್ ಬೇಸಿಸ್ ಮೇಲೆ ಕೆಲಸವನ್ನು ಮಾಡುತ್ತಿರಬಹುದು, ಪೀಸ್ ರೇಟ್ ಮೇಲೆ ಕೆಲಸವನ್ನು ಮಾಡುತ್ತಿರಬಹುದು, ಬೇರೆ ಬೇರೆ ಬೇಸಿಸ್ ಮೇಲೆ ಕೆಲಸವನ್ನು ಮಾಡತಕ್ಕಂತಹ ವ್ಯವಸ್ಥೆ ಇದೆ. ಇವತ್ತು ಈ ಕಾರ್ಮಿಕರು ಒಂದು ದಿವಸ ಕಟ್ಟಡದಲ್ಲಿ ಕೆಲಸವನ್ನು ಮಾಡುತ್ತಿರಬಹುದು, ನಾಳೆ ರಸ್ತೆಯಲ್ಲಿ ಕೆಲಸವನ್ನು ಮಾಡುತ್ತಿರಬಹುದು. ಇವತ್ತು ಬೀಡಿ ಕಾರ್ಮಿಕರಿಗೆ ಹೆಚ್ಚು ವೇತನವನ್ನು ಕೊಡಬಹುದು, ಆದರೆ ಬೇರೆ ಬೇರೆ ರೀತಿ ಮತ್ತು ಬೇರೆ ಬೇರೆ ಕಡೆಗಳಲ್ಲಿ ಕೆಲಸ ಮಾಡುವವರು ನಮ್ಮ ಕರ್ನಾಟಕ ರಾಜ್ಯದಲ್ಲಿದ್ದಾರೆ. ಸಂಘಟಿತ ಕ್ಷೇತ್ರದಲ್ಲಿ ದುಡಿಯತಕ್ಕಂತಹ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್, ಗ್ರಾಚ್ಯುಟಿ ಫಂಡ್, ಅವರ ಆರೋಗ್ಯಕ್ಕಾಗಿ ಎ.ಎಸ್.ಐ. ಇಂಥ ಒಂದು ವ್ಯವಸ್ಥೆ ಇದೆ. ಆದರೆ, ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಇಂಥ ವ್ಯವಸ್ಥೆ ಇಲ್ಲ ಎನ್ನುವುದನ್ನು ತಿಳಿದುಕೊಂಡೇ ನಾವು ಕರ್ನಾಟಕ ರಾಜ್ಯದಲ್ಲಿ 14 ಕ್ಷೇತ್ರಗಳಲ್ಲಿ ಒಂದು ವೆಲ್‌ಫೇರ್ ಬೋರ್ಡ್ ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಂಡು, ಅದು ಈಗ ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಶ್ರೀ ರಾಮರೆಡ್ಡಿಯವರು ಕೇಳಿದಂತಹ ಪ್ರಶ್ನೆಯಂತೆ ಕೆಲವು ಡಾಕ್ ನೋಟಿಫಿಕೇಷನ್‌ನಲ್ಲಿ ಕನಿಷ್ಟ ವೇತನವನ್ನು ಮಾಡಿಲ್ಲ ಎಂಬುದು ನಿಜ. ಕೆಲವೊಂದು ವಿಷಯಗಳಲ್ಲಿ ತಡವಾಗಿದೆ. ಕೆಲವೊಂದು ಚಟುವಟಿಕೆಗಳು ಏನಿವೆ, ಕೆಲವೊಂದು ಕೆಲಸಗಾರರು ಮಾಡತಕ್ಕಂತಹ ಕೆಲಸ ಏನಿವೆ, ಉದಾಹರಣೆಗೆ ಹೇಳುವುದಾದರೆ, ಮಿನಿ ಸಿಮೆಂಟ್ ಪ್ಲಾಂಟ್ ಕರ್ನಾಟಕದಲ್ಲಿ ಏನಿದೆ ಇದಕ್ಕೆ ಮೊಟ್ಟ ಮೊದಲನೆಯದಾಗಿ ಕನಿಷ್ಟ ವೇತನವನ್ನು ನಾವು ನಿಗದಿ ಮಾಡುತ್ತಿದ್ದೇವೆ. ನಾವು ಮಿನಿ ಸಿಮೆಂಟ್ ಪ್ಲಾಂಟ್ ಮತ್ತು ದೊಡ್ಡ ಸಿಮೆಂಟ್ ಪ್ಲಾಂಟ್ ಅವೆರಡನ್ನೂ ಹೋಲಿಸಿ ನೋಡಿದಾಗ, ಅಲ್ಲಿನ ಕೆಲಸವೇ ಬೇರೆ ಇದೆ, ಇಲ್ಲಿನ ಕೆಲಸವೇ ಬೇರೆ ಇದೆ, ಮಾಡತಕ್ಕಂತಹ ಕೆಲಸವೇ ಬೇರೆ ಬೇರೆ ಇರುತ್ತದೆ. ಅದೇ ರೀತಿಯಾಗಿ ಅವರು ಕೊಡತಕ್ಕಂತಹ ಕೂಲಿಯೇ ಬೇರೆ ಇರುತ್ತದೆ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಆ ಕಾರಣಕ್ಕಾಗಿ ಲೇಟಾಗುತ್ತಿದೆ. ಮತ್ತು ನೇಕಾರರ ಬೇಡಿಕೆ ಏನಿದೆ ಇದು ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಮತ್ತೊಬ್ಬ ಸದಸ್ಯರು ಕನಿಷ್ಟ ವೇತನದಲ್ಲಿ ಯಾರ್ಯಾರು ಗುರುತಿಸುವಂತಹ ಕಾರ್ಮಿಕರು ಇದ್ದಾರೆ ಎಂದು ಕೇಳಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಕನಿಷ್ಟ ವೇತನದ ಅಡ್ವೈಜರಿ ಬೋರ್ಡ್ ಏನಿದೆ ಆ ಬೋರ್ಡ್‌ನಲ್ಲಿರತಕ್ಕಂಥವರು ಏನು ರೆಪ್ರಜಂಟೇಷನ್ ಮಾಡತಕ್ಕಂಥ ಪ್ರತಿನಿಧಿಗಳು ಇದ್ದಾರೆ, ಎಲ್ಲಾ ಮಾಲೀಕರ ಪ್ರತಿನಿಧಿಗಳು ಇದ್ದಾರೆ, ಸರ್ಕಾರದ ಪ್ರತಿನಿಧಿಗಳೂ ಇದ್ದಾರೆ. ಅವರುಗಳಿಗೆಲ್ಲಾ ಬಹಳ ಅನುಭವವು ಆ ಕ್ಷೇತ್ರದಲ್ಲಿದೆ.

ಆ ರೀತಿಯ ಅನುಭವ ಇರುವುದರಿಂದ ಆ ಕಮಿಟಿಯಲ್ಲಿ ಅವರುಗಳನ್ನು ತೆಗೆದುಕೊಂಡಿರುತ್ತೇವೆ. ಆ ಅನುಭವದ ಮೇಲೆ ಯಾರಿಗೆ ಎಷ್ಟು ಅನಿಷ್ಟ ವೇತನ ಯಾವ ಉದ್ಯೋಗಕ್ಕಾಗಿ, ಯಾವ ಕೆಲಸಕ್ಕಾಗಿ ಎಷ್ಟು ಕನಿಷ್ಟ ವೇತನವನ್ನು ಕೊಡಬೇಕೆಂದು ಅವರು ಶಿಫಾರಸ್ಸು ಮಾಡುತ್ತಾರೆಂದು ಒಂದು ಮಾತನ್ನು ಈ ಸದನಕ್ಕೆ ಹೇಳುವುದಕ್ಕೆ ಇಚ್ಛೆಯನ್ನು ಪಡುತ್ತೇನೆ.

ವಿಷಯ:- ಧಾರವಾಡದಲ್ಲಿ ಐ.ಟಿ.ಐ. ಪ್ರಾರಂಭಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 115 (1041)

ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ):- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ ಜಿಲ್ಲಾ ಕೇಂದ್ರವು ಉತ್ತರ ಕರ್ನಾಟಕದ ಪ್ರಮುಖ ಶೈಕ್ಷಣಿಕ ಕೇಂದ್ರವೆಂದು ಸರ್ಕಾರ ಪರಿಗಣಿಸಿದೆಯೇ?

ಆ) ಹಾಗಿದ್ದಲ್ಲಿ ಧಾರವಾಡದಲ್ಲಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು?

ಶ್ರೀ ಪಿ.ಗುರುನಾಥ್ (ಕಾರ್ಮಿಕ ಸಚಿವರು):-

ಅ) ಹೌದು

ಆ) ಸದ್ಯಕ್ಕೆ ಇಲ್ಲ.

ಶ್ರೀ ಚಂದ್ರಕಾಂತ ಜಿ.ಬೆಲ್ಲದ್:- ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯು ಶೈಕ್ಷಣಿಕ ಕ್ಷೇತ್ರ ಎನ್ನುವುದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಎರಡು ವಿಶ್ವವಿದ್ಯಾನಿಲಯ ಇರುವಂತಹ ಧಾರವಾಡ ಜಿಲ್ಲೆಯಲ್ಲಿ ಐ.ಟಿ.ಐ. ಶಾಲೆಯನ್ನು ಪ್ರಾರಂಭ ಮಾಡುತ್ತೇವೆಂದು ಸನ್ಮಾನ್ಯ ಮಂತ್ರಿಗಳು ನಮ್ಮ ಜೊತೆಯಲ್ಲಿಯೇ ಬಂದು ಕಟ್ಟಡದ ಪರಿಶೀಲನೆಯನ್ನು ಸಹ ಮಾಡಿಕೊಂಡು ಬಂದಿದ್ದೇವೆ. ಶಾಲೆಯನ್ನು ಪ್ರಾರಂಭಿಸುವುದಾಗಿ ಆಶ್ವಾಸನೆಯನ್ನು ಸಹ ನನಗೆ ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಸದರಿ ಶಾಲೆಯನ್ನು ಪ್ರಾರಂಭಿಸಬೇಕೆಂದು ತಮ್ಮ ಮೂಲಕ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಗುರುನಾಥ್ :- ಮಾನ್ಯ ಅಧ್ಯಕ್ಷರೆ, ಶ್ರೀ ಚಂದ್ರಕಾಂತ್ ಬೆಲ್ಲದ್‌ರವರು ಹೇಳಿದಂತಹ ವಿಷಯ ನಿಜವಿದೆ. ಕಟ್ಟಡವು ಅಲ್ಲಿ ಇದ್ದರೂ ಸಹ ಐ.ಟಿ.ಐ. ಶಾಲೆಯಲ್ಲಿ ಪೀಠೋಪಕರಣ, ಸಿಬ್ಬಂದಿಯ ವರ್ಗ, ಯಂತ್ರೋಪಕರಣಗಳ ಅವಶ್ಯಕತೆ ಇದೆ. ಇದನ್ನು ಸರ್ಕಾರ ಮಾಡುವುದು ಅದು ಹೊಸ ಯೋಜನೆಯಲ್ಲಿದೆ. ಇದರ ಬಗ್ಗೆ ಸರ್ಕಾರ ಯೋಜನೆಯನ್ನು ಮಾಡುತ್ತಿದೆ.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್:- ಮಾನ್ಯ ಅಧ್ಯಕ್ಷರೆ, ಅಲ್ಲಿಯ ಅಧಿಕಾರಿಗಳು ಕೂಡ ಬಹಳಮುತುವರ್ಜಿಯಿಂದ ಆ ಒಂದು ಕಟ್ಟಡವನ್ನು ಐ.ಟಿ.ಐ. ಶಾಲೆ ಪ್ರಾರಂಭಿಸಲು ಬಿಡಿಸಿಕೊಟ್ಟಿದ್ದಾರೆ. ಮಾನ್ಯ ಸಚಿವರನ್ನು ಕರೆದುಕೊಂಡು ಹೋಗಿ ಸಹ ತೋರಿಸಿದ್ದೇವೆ.

ಅಧ್ಯಕ್ಷರು:- ನೀವು ಮತ್ತು ಮಾನ್ಯ ಸಚಿವರು ಇಬ್ಬರು ಮೊದಲೇ ಮಾತನಾಡಿಕೊಂಡು ಬಂದಿರುತ್ತೀರಿ ಅವರು ಐ.ಟಿ.ಐ. ಶಾಲೆಯನ್ನು ಪ್ರಾರಂಭಿಸುತ್ತಾರೆ ಬಿಡಿ. ನೀವು ಕೇಳುವುದಕ್ಕೂ ರೆಡಿಯಾಗಿದ್ದೀರಿ ಅವರು ಮಾಡುವುದಕ್ಕೂ ತಯಾರಿದ್ದಾರೆ.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್:- ಈ ವರ್ಷದಿಂದಲೇ ಐ.ಟಿ.ಐ. ಶಾಲೆಯನ್ನು